(ಈ) ಕರ್ನಾಟಕ ರಾಜ್ಯದಲ್ಲಿ ಗುರುತಿನ ಚೀಟಿಯನ್ನು ಕಡ್ಡಾಯಗೊಳಿಸುವುದು

ಶ್ರೀ ವಸಂತ ವಿ. ಸಾಲಿಯಾನ (ಕಾಪು):- ಮಾನ್ಯ ಅಧ್ಯಕ್ಷರೇ, 1995-96ನೇ ಸಾಲಿನಲ್ಲಿ ಎಷ್ಟೋ ಕೋಟಿ ರೂ.ಗಳನ್ನು ವಿಚ್ರ್ಯು ಮಾಡಿ ಕರ್ನಾಟಕ ರಾಜ್ಯದಲ್ಲಿ ಚುನಾವಣೆ ಆಯೋಗವು ಮತದಾರರಿಗೆ ಗುರುತಿನ ಕಾರ್ಡ್‌ನ್ನು ಕೊಟ್ಟಿದೆ. ಇದರ ಉದ್ದೇಶವು ಲೋಕಸಭೆ, ವಿಧಾನಸಭೆ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮಪಂಚಾಯತ್, ಚುನಾವಣೆಗಳು ಸಾಂಗವಾಗಿ ನೆಡಯಬೇಕು ಎಂಬುದಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಯಾವುದೇ ರೀತಿಯ ತೋಳು ಬಲದಿಂದ ಫೋರ್ಜರಿ ಓಟಿಂಗ್ ಆಗಬಾರದು ಎಂಬ ಕಾರಣಕ್ಕಾಗಿ ರಾಜ್ಯಾದ್ಯಂತ ಇದನ್ನು ಜಾರಿಗೆ ತಂದಿದ್ದಾರೆ. ಆದರೆ ಅನಂತರ ನಡೆದ ಯಾವುದೇ ಒಂದು ಚುನಾವಣೆಯಲ್ಲಿ ಗುರುತಿನ ಕಾರ್ಡ್‌ನ್ನು ತೋರಿಸಿ ಮತದಾನ ಮಾಡಬೇಕೆಂಬುದನ್ನು ಕಡ್ಡಾಯ ಮಾಡಿಲ್ಲ. ರಾಜ್ಯದಲ್ಲಿ ಯಾವುದೇ ಒಂದು ಚುನಾವಣೆ ನಡೆಯುವಂಥ ಸಂದರ್ಭದಲ್ಲಿ ಕಡ್ಡಾಯವಾಗಿ ಗುರುತಿನ ಕಾರ್ಡ್‌ನ್ನು ತೋರಿಸಿ ಮತದಾನ ಮಾಡಬೇಕೆಂಬುದನ್ನು ಜಾರಿ ತರಬೇಕೆಂದು ಹಾಗೂ ಈ ವಿಚಾರವನ್ನು ಚುನಾವಣಾ ಆಯೋಗಕ್ಕೆ ತಿಳಿಸಬೇಕಾಗಿ ಕೋರುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಅಧ್ಯಕ್ಷರೇ, ಇದು ನೇರವಾಗಿ ನಮ್ಮ ವ್ಯಾಪ್ತಿಗೆ ಬಾರದಿದ್ದರೂ ಕೂಡ ಮಾನ್ಯ ಸದಸ್ಯರು ಹೇಳಿದ ವಿಚಾರವು ನಿಜವಾಗಿದೆ. ಐಡೆಂಟಿಟಿ ಕಾರ್ಡ್ಸ್ ಬೇಕೇ ಬೇಕು. ಅದನ್ನು ಶೇಷ್‌ನವರು ಶುರು ಮಾಡಿದರು. ರಾಷ್ಟ್ರವ್ಯಾಪಿಯಾಗಿ ಈ ಕುರಿತ ಕಾರ್ಯಕ್ರಮವನ್ನು ನಡೆಸಿದ್ದಾರೆ. ಭಾವಚಿತ್ರಗಳನ್ನು ತೆಗೆದು ಗುರುತಿನ ಚೀಟಿಯನ್ನು ಕೊಡುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಆದರೆ ಚುನಾವಣೆಯಲ್ಲಿ ಅದನ್ನು ಜಾರಿಗೆ ತರಲಿಲ್ಲ. ಅದನ್ನು ಜಾರಿಗೆ ತಂದರೆ ಕಳ್ಳ ಓಟು ಹಾಕತಕ್ಕಂಥಾದ್ದು ನಿಲ್ಲುತ್ತದೆ. ಆದರ ಜೊತೆಗೆ ಇಲೆಕ್ಟ್ರಾನಿಕ್ಸ್ ಓಟಿಂಗ್ ಸಿಸ್ಟಂ ತಂದರೆ ಇಂಥ ಅಕ್ರಮಗಳೆಲ್ಲವೂ ನಿಲ್ಲುತ್ತದೆ. ಬಹಳ ಕಡೆಗಳಲ್ಲಿ 20-30 ಸಾವಿರ ಓಟುಗಳನ್ನು ಅಕ್ರಮದಿಂದ ಹಾಕತಕ್ಕಂಥಾದ್ದಕ್ಕೆ ಕಡಿವಾಣ ಹಾಕಿದಂತೆ ಆಗುತ್ತದೆ. ನಿಮ್ಮ ಚಿಂತನೆಯು ಬಹಳ ಒಳ್ಳೆಯದು. ಇದನ್ನು ನಾವು ಕೇಂದ್ರ ಚುನಾವಣಾ ಆಯೋಗಕ್ಕೆ ತಿಳಿಸಲು ಕ್ರಮ ತೆಗೆದುಕೊಳ್ಳುತ್ತೇವೆ.

(ಉ) ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ವಿದ್ಯುತ್ ಸಬ್‌ಸ್ಟೇಷನ್

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) :- ಸನ್ಮಾನ್ಯ ಅಧ್ಯಕ್ಷರೇ, ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ಉಳ್ಳಾಲ ನಗರ ಪಂಚಾಯತ್ ಮತ್ತು ಹೊರವಲಯಗಳಲ್ಲಿ ಸುಮಾರು 20 ಸಾವಿರಕ್ಕಿಂತಲೂ ಮಿಕ್ಕಿ ವಿದ್ಯುತ್ ಗ್ರಾಹಕರು ಇದ್ದು 1995ನೇ ಇಸವಿಯ ಅಧಿವೇಶನದಲ್ಲಿ ಉಳ್ಳಾಲದಲ್ಲಿ ಒಂದು ಸಬ್‌ಸ್ಟೇಶನ್ ಸ್ಥಾಪಿಸುವ ಬಗ್ಗೆ ಕೇಳಿದ್ದೆ. 30-4-1997 ನೇ ಇಸವಿಯೊಳಗೆ ಸಬ್‌ಸ್ಟೇಷನ್‌ನ್ನು 1 ಕೋಟಿ 97 ಲಕ್ಷ ರೂ.ಗಳಲ್ಲಿ ಪೂರೈಸುತ್ತೇವೆ ಎಂದು ನನಗೆ ಭರಸೆ ಕೊಟ್ಟಿದ್ದರು. ಆದರೆ ಇಷ್ಟರವರೆಗೂ ಅಲ್ಲಿ ಯಾವುದೇ ಕಾಮಗಾರಿಗಳು ಆಗಿಲ್ಲ. ಅಲ್ಲಿ ಇವರಿಗೆ ಬೇಕಾಗಿದ್ದ ಜಮೀನಿನ ಡಿಸ್ಪ್ಯೂಟ್ ಇತ್ತು. ನಾನು ಜಿಲ್ಲಾಧಿಕಾರಿಗಳವರ ಹತ್ತಿರ ಮಾತನಾಡಿ, ಪೆರ್ಮನೂರು ಪಂಚಾಯತ್‌ನವರ ಒಂದು ಎಕರೆ ಜಾಗವನ್ನು ಜಿಲ್ಲಾಧಿಕಾರಿಗಳು ಇಲಾಖೆಗೆ ಕೊಟ್ಟಿದ್ದಾರೆ. ಹಾಗೆಯೇ ಎಂಟರ್‌ಅಪಾನ್ ಪರ್ಮಿಕ್ಷನ್ ಕೊಟ್ಟು ಒಂದು ವರ್ಷ ಕಳೆದಿದೆ. ಆದರೂ ಕೂಡ ಇಷ್ಟರವರೆಗೂ ಯಾವುದೇ ಕೆಲಸವನ್ನು ಮಾಡಿಲ್ಲ. ಪದೇ ಪದೇ ಇಲಾಖಾ ಅಧಿಕಾರಿಗಳು ಇವತ್ತೂ, ನಾಳೆ ಎಂದು ಹೇಳುತ್ತಾ ಇದ್ದಾರೆ. ಅಲ್ಲಿ ಕುಡಿಯುವ ನೀರಿಗೆ ಕರೆಂಟ್ ಪರ್ಮಿಕ್ಷನ್ ಕೊಡಲು ಕಷ್ಟವಾಗಿದೆ. ಲೋ ಒಲ್ಟೇಜ್ ಸಮಸ್ಯೆಗಳು ಇವೆ. ಹೀಗೆ ಬೇರೆ

ಬೇರೆ ತೊಂದರೆಗಳು ಇರುವುದರಿಂದ ನಾನು ಸರಕಾರವನ್ನು ಒತ್ತಾಯ ಮಾಡುವುದೇನೆಂದರೆ, ಕೂಡಲೇ ಸಬ್‌ಸ್ಟೇಕ್ಷನ ಮಾಡಬೇಕು ಮತ್ತು ಅದರ ಜೊತೆಗೆ ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ವಿದ್ಯುತ್‌ಗ್ರಾಹಕರು ಇದ್ದರೂ ಕೂಡ ಅಲ್ಲಿ ಸರ್ವೀಸ್ ಸ್ಟೇಕ್ಷನ್ ಇಲ್ಲ. ಸರಕಾರದವರು ಈ ಕುರಿತು ಬಹಳ ಸಮಯದಿಂದ ಒತ್ತಾಯ ಮಾಡುತ್ತಾ ಬಂದಿದ್ದೇನೆ. ನಮಗೆ ಅಲ್ಲಿ ಪೂರ್ಣಕಾಲಿಕ ವೆಹಿಕಲ್ ಕೊಟ್ಟು ಸರ್ವೀಸ್ ಸ್ಟೇಕ್ಷನ್‌ನ್ನು ಕೊಡಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿರತಕ್ಕಂಥ ವಿಚಾರದ ಬಗ್ಗೆ ಮಾಹಿತಿಯನ್ನು ತರಿಸಿ ಸೋಮವಾರ ಅಥವಾ ಮಂಗಳವಾರ ಸದನದಲ್ಲಿ ಒಂದು ವರದಿಯನ್ನು ಕೊಡುತ್ತೇನೆ.

(ಊ) <u>ಕುಣಿಗಲ್ ಪಂಚಾಯತ್ ಸಮಿತಿಯಲ್ಲಿ ಸಿಬ್ಬಂದಿ ಅಧಿಕಾರಿಯೊಬ್ಬರ ವರ್ತನೆ ಪ್ರತಿಭಟಿಸಿ ರಜೆ ಹಾಕಿರುವುದು</u>

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :- ಮಾನ್ಯ ಅಧ್ಯಕ್ಷರೇ, ಕುಣಿಗಲ್ ಪಂಚಾಯತ್ ಸಮಿತಿಯಲ್ಲಿ ಒಬ್ಬ ದಲಿತ ಹೆಣ್ಣುಮಗಳು ಅಧ್ಯಕ್ಷರಾಗಿ ಕೆಲಸ ಮಾಡುತ್ತಾ ಇದ್ದಾರೆ. ಕಳೆದ ಆರು ತಿಂಗಳಿಂದ ಅಲ್ಲಿ ಒಬ್ಬ ಎಕ್ಸಿಕ್ಯೂಟಿವ್ ಆಫೀಸರ್ ಎಇಇ ಕೆಲಸ ಮಾಡುತ್ತಾ ಇದ್ದಾರೆ. ತೊಂದರೆ ಎನಾಗಿದೆ ಅಂದರೆ ಕಳೆದ ಮೂರು ದಿನಗಳ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿಗಳ ಅರೋಗೆಂಟ್ ಮತ್ತು ಅಡಾಸಿಟಿಯನ್ನು ಪ್ರತಿಭಟಿಸಿ, ಅಧ್ಯಕ್ಷತೆಯವರೂ ಸೇರಿ, ಎಲ್ಲರೂ ಪ್ರತಿಭಟಿಸುತ್ತಿದ್ದಾರೆ. ನಮಗೆ ಗೌರವ ಕೊಡುತ್ತಾ ಇಲ್ಲ, ಬಹಳ ಅರೋಗೆಂಟ್ ಆಗಿ ನಡೆದುಕೊಳ್ಳುತ್ತಾ ಇದ್ದಾರೆ ಎಂದು ಅವರು ಹೇಳುತ್ತಿದ್ದಾರೆ. ಕಳೆದ ಎರಡು ದಿವಸಗಳಿಂದ ಪೂರ್ಣ ಸಿಬ್ಬಂದಿ ವರ್ಗ, ಜವಾನನಿಂದ ಹಿಡಿದು ಎಲ್ಲರೂ ಕೂಡ ಎನ್‌ಮಾಸ್ ಆಗಿ ರಜೆಯನ್ನು ಹಾಕಿ ಇವೊತ್ತು ಸಂಪೂರ್ಣವಾಗಿ ಅಲ್ಲಿ ಅಡ್ಮಿನಿಸ್ಟ್ರೇಟಿವ್ ಕೈಸಿಸ್ ಸ್ಟಾರ್ಟ್ ಆಗಿದೆ. ದಯಮಾಡಿ ಇದರ ಬಗ್ಗೆ ಗಮನಕೊಡಬೇಕು. ಏಕೆಂದರೆ ನಾವು ಈಗ ಮಾರ್ಚ್ ತಿಂಗಳಲ್ಲಿ ಇದ್ದೇವೆ. ಎಲ್ಲಾ ಕಾರ್ಯಕ್ರಮಗಳೂ ಸ್ಥಗಿತವಾಗುತ್ತವೆ. ಆದ್ದರಿಂದ ಸಾರ್ವಜನಿಕರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು, ಕುಣಿಗಲ್ ತಾಲ್ಲೂಕಿನ ಕಾಮಗಾರಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಅಲ್ಲಿನ ಸಮಸ್ಯೆಯನ್ನು ಪರಿಹಾರ ಮಾಡಿ ಅಲ್ಲಿನ ಕೆಲಸ ಕಾರ್ಯಗಳು ನಡೆಯುವುದಕ್ಕೆ ಸರಕಾರದವರು ಕ್ರಮ ತೆಗೆದುಕೊಳ್ಳ ಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ. ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಸದಸ್ಯರು ತಮ್ಮ ಕ್ಷೇತ್ರದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಬಹುಶ: ಅವರು ಹೇಳಿರತಕ್ಕಂಥ ವಿಚಾರಗಳು ಸರಿಯಾಗಿದ್ದರೆ, ಈಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಅಲ್ಲಿ ನಡೆಯುತ್ತಿರತಕ್ಕಂಥ , ಅಧಿಕಾರಿಗಳ ಮದ್ಯದ ಒಳಜಗಳವನ್ನು ನಿಲ್ಲಿಸುವುದಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆ. ಮತ್ತು ಅವರು ಹೇಳಿದ ಇತರ ವಿಚಾರಗಳ ಬಗ್ಗೆ ಸೋಮವಾರ ಅಥವಾ ಮಂಗಳವಾರ ವಸ್ತುಸ್ಥಿತಿಯನ್ನು ತಿಳಿದು ಸದನದಲ್ಲಿ ತಮಗೆ ಉತ್ತರವನ್ನು ಕೊಡುತ್ತೇವೆ.